ಅಂತ ಬಂದಿದ್ದರು. ಅಯ್ಯೋ ಬ್ಯಾಂಕ್ ಕ್ಲರ್ಕು ಅಂತ ಬಿಟ್ಟುಬಿಟ್ಟೆವಿ. ಕಡೆಗೆ ನನ್ನ ಗ್ರಹಚಾರಕ್ಕೆ ನೀವು ಸಿಕ್ಕಿದಿರಿ' ಅಂದು ತಾನು ಯಾವುದೋ ಘನಂದಾರಿ ಜೋಕ್ ಮಾಡಿದ ಹಾಗೆ ಬೀದೀಲೇ ಗೊಳ್ ಅಂತ ನಕ್ಕು ಬಿಟ್ಟರು. ರಾಯರಿಗೆ ಆಕೆ ನಕ್ಕಾಗ ಚೆನ್ನಾಗಿ ಕಂಡರೂ ಜೋಕ್ ಮಾತ್ರ ಅರ್ಥ ಆಗದೇ ಹೋಯಿತು. ಸಾಲದ್ದಕ್ಕೆ ಅಕ್ಕಪಕ್ಕ ಹೋಗುತ್ತಿದ್ದ ಜನ ಇವರನ್ನೇ ನೋಡಿ ಮುಸಿ ಮುಸಿ ನಕ್ಕಿದ್ದು ಕಂಡು ರಾಯರಿಗೆ ಏನು ಹೇಳಬೇಕೋ ತಿಳೀದೇ ಹೋಯಿತು. 'ಸರಿ, ಸರಿ, ನಡಿ, ಮುಂಚೆ ಕಾಫಿ ಕುಡಿಯೋಣ, ತಲೆನೋವು ಬರೋಹಾಗೆ ಅನ್ನಿಸ್ತಾ ಇದೆ' ಅಂದಿದ್ದಕ್ಕೆ ಆಕೆ ರಿಯಾಕ್ಟ್ ಮಾಡಿದ್ದೇ ಬೇರೆ ತರಹ ಆಯಿತು. ಅಲ್ಲೇ ರಸ್ತೆಯಲ್ಲೇ ನಿಂತು, 'ನನ್ನಿಂದಾನೆ ನಿಮಗೆ ತಲೆ ನೋವು ಬಂದಿರಬೇಕು ಅಲ್ಲವಾ? ಎಲ್ಲ ನನ್ನಿಂದಾನೆ, ನನ್ನಿಂದಾನೆ' ಅಂತ ಅದೇ ಪದಾನ ರಿಪೀಟ್ ಮಾಡಿದ್ದಲ್ಲದೆ ಊ, ಊ ಅಂತ ಅಂದರು ಬೇರೆ. ರಾಯರಿಗೆ ಅಹಲ್ಯಬಾಯಿ ಮಾತು ಮಾತಿಗೂ ಊ, ಊ ಅನ್ನುತಾರೆ ಅಂತ ತಿಳಿಯಲಿಕ್ಕೆ ಬಹಳ ಹೊತ್ತೇನೂ ಹಿಡಿಯಲಿಲ್ಲ. ಆಕೆಯ ಗಂಟಲು ಬೇರೆ ಜೋರು! ರಸ್ತೆಯಲ್ಲಿ ಜನ ತಮ್ಮನ್ನೆ ನೋಡುತ್ತಿದ್ದಾರೆನೋ ಅಂತ ರಾಯರಿಗೆ ಅನ್ನಿಸಿ ಇಲ್ಲ, ಇಲ್ಲ, ಬಾ, ಬಾ ಅಂದು ಆಕೆನ ಕರಕೊಂಡು ಮುಂದೆ ನಡೆಯುವುದಕ್ಕೆ ಇದ್ದ ಬುದ್ಧಿಯೆಲ್ಲ ಖರ್ಚಾಯಿತು. ಆದರೆ ಆಕೆ 'ಬೇಡ, ಬೇಡ, ಈಗ ಮನೆಗೆ ವಾಪಸ್ ಹೋಗೋಣ' ಅಂದು ರೈಟ್ ಎಬೌಟ್ ಟರ್ನ್ ಆಗಿ, ರಾಯರು 'ತಾಳು, ತಾಳೆ, ತಾಳ್ರೀ' ಅನ್ನುತ್ತಿದ್ದರೂ ನಡೆದೇಬಿಟ್ಟರು. ಇದೊಳ್ಳೆ ಎಡವಟ್ಟಾಯ್ತಲ್ಲ ಅಂತ ರಾಯರು ಅಂದುಕೊಳ್ಳುತ್ತಿದ್ದರೆ ಆಕೆ ಹತ್ತು ಹೆಜ್ಜೆ ನಡೆದವರು ಮತ್ತೆ ಹಾಗೆ ವಾಪಸ್ಸು ತಿರುಗಿ, 'ಬೇಡ, ಹೋಟೆಲಿಗೆ ಹೋಗಿ ಜುಂ ಅಂತ ಕಾಫಿ ಕುಡಿಯೋಣ' ಅಂದರು. ಸದ್ಯ, ಒಪ್ಕೊಂಡ್ಲಲ್ಲ, ಅಂತ ರಾಯರು ತಾವು ಮದುವೆ ಆಗಬೇಕಂತಿದ್ದ ಹೆಣ್ಣಿನ ಜೊತೆ ಆಗಿನ ಕಾಲದಲ್ಲಿ ಅತ್ಯಂತ ಫ್ಯಾಷನಬಲ್ ಅನ್ನಿಸಿಕೊಂಡಿದ್ದ ದಾಸಪ್ರಕಾಶ್ ಹೋಟೆಲಿನಲ್ಲಿ 'ಲಾನ್ ಸರ್ವೀಸ್' ಅಂತ ಬೋರ್ಡ್ ಹಾಕಿದ್ದ ತಾಣದಲ್ಲಿ ಕುಳಿತರು.

ಹೋಗಿ ಕುಳಿತ ಮೇಲೆ ಎರಡನೆಯ ದೃಶ್ಯ ತೆರೆದುಕೊಂಡಿದ್ದು! ಮೊದಲಿನಿಂದಲೂ ರಾಯರಿಗೆ ತಮ್ಮ ಹೆಂಡತಿಯಾಗೋಳಿಗೆ ಮೊದಲು ಜಾಮೂನು ನಂತರ ಮಸಾಲೆದೋಸೆ, ಕಡೇಗೆ ಕಾಫಿ ಕುಡಿಸಿ ನಂತರ ವಾಪಸ್ಸು ಮನೆಯವರೆಗೂ ನಡೆದುಕೊಂಡು ಹೋಗಿ ಬಿಟ್ಟುಬರುವುದು, ಸಿನಿಮಾಗಳಲ್ಲಿ ಆಗೋ ತರಹ ಅಂತ ಹಿಂದೆ ಬ್ಯಾಕ್‌ಗ್ರೌಂಡ್ ಸಾಂಗೂ ಎಲ್ಲಾ ಕಲ್ಪಿಸಿಕೊಂಡಿದ್ದು. 'ಏನು ತಗೋತೀಯಾ, ಸ್ವೀಟು ಏನು ಇಷ್ಟ ನಿನಗೆ?' ಅಂತ ಕೇಳಿದರು. ಆಕೆ 'ನನಗೆ ಸ್ವೀಟು ಅಂದರೆ ಆಗಲ್ಲ' ಅಂದರು.

'ಸರಿ, ದೋಸೆ ತಿಂತೀಯಾ, ಮಸಾಲೆ ದೋಸೆ ಇಲ್ಲಿ ಚೆನ್ನಾಗಿರುತ್ತೆ' ಅಂತ ತಾವು ದಿನಾ ಇಲ್ಲಿಗೆ ಬಂದು ದೋಸೆ ತಿನ್ನೋ ತರಹ ಆಕೆಗೆ ಹೇಳಿದರೆ ಆಕೆ ಬೇಡ ಎಂದು ತಲೆ ಎತ್ತಿ ಆಕಾಶ ನೋಡಿದರು. ಅಲ್ಲೇ ಲಾನಿನಲ್ಲಿದ್ದ ದೊಡ್ಡ ಮರದ ಮೇಲಿನ ಕೊಂಬೆಯ ಮೇಲೆ ಕುಳಿತಿದ್ದ ಕಾಗೆಯನ್ನ ನೋಡಿ ಆಕೆ 'ನನಗೆ ಕಾಗೇ ಅಂದರೆ ಮಾತ್ರ ಆಗಲ್ಲ' ಅಂದರು.

ಸದ್ಯ ಮಾತನಾಡಕ್ಕೆ ಏನಾದರೂ ಟಾಪಿಕ್ ಸಿಕ್ತಲ್ಲಾ ಅಂತ ರಾಯರು 'ಯಾಕೋ' ಅಂದರೆ ಆಕೆ 'ಯಾಕೂ ಇಲ್ಲ, ಸುಮ್ಮನೆ' ಅಂದರು. ರಾಯರು ಹಾಗಾದರೆ ಯಾವ ಪಕ್ಷಿ ಇಷ್ಟ ನಿನಗೆ ಅಂತ ಕೇಳಿ ನವಿಲೋ, ಕೋಗಿಲೆನೋ ಹೇಳಿದರೆ ತಾವು ಯಾವ ಪ್ರಶ್ನೆ ಕೇಳಬೇಕಂತ ಯೋಚಿಸುತ್ತಾ ಆಕೆಯ ಕುರ್ಚಿಯ ಹತ್ತಿರ ತಮ್ಮ ಕುರ್ಚಿಯನ್ನ ಜರುಗಿಸಿ ಕುಳಿತುಕೊಳ್ಳಲು ನೋಡಿದರೆ ಆಕೆ 'ಅದ್ಯಾಕೆ, ಹಾಗೆ ಕುರ್ಚೀನ ನನ್ನ ಹತ್ತಿರ ನೂಕಿದೀ, ದೂರಾನೆ ಇರಲಿ' ಅಂತ